ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ಶಹಾಪುರದಲ್ಲಿ ಕಚ್ಚಾ ವಸ್ತುಗಳ ಸಂಸ್ಕರಣ ಘಟಕ ಪ್ರಾರಂಭಿಸಿಂವ ಬಗೆಗೆ.

೧೯೦೨. ಶ್ರೀ ಶಿವಶೇಖರಪ್ಪಗೌಡ(ಶಹಾಪುರ).—ಮಾನ್ಯ ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದವರು ಶಹಪುರದಲ್ಲಿ ಕಚ್ಚಾ ವಸ್ತುಗಳ ಸಂಸ್ಕರಣ ಘಟಕವೊಂದನ್ನು ಪ್ರಾರಂಭಿಸಲು ಉದ್ದೇಶಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಎಂದು ಪ್ರಾರಂಭಿಸಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ನಿಜವಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಗಂಗಾವತಿಯಿಂದ ಬೇರೆ ಕಡೆಗೆ ಕಬ್ಬು ರವಾನೆ ಬಗ್ಗೆ.

೧೯೦೩. ಶ್ರೀ ಶ್ರೀರಂಗದೇವರಾಯಲು(ಕನಕಗಿರಿ).—ಮಾನ್ಯ ವಾಣಿಜ್ಯ, ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ನೇ ಸಾಲಿನಲ್ಲಿ ಗಂಗಾವತಿ ಸುತ್ತಮುತ್ತ ಸುಮಾರು ೩,೫೦೦ ಎಕರೆ ಜಮೀನಿನಲ್ಲಿ ಕಬ್ಬು ಬೆಳೆದಿದ್ದು ಸುಮಾರು ೮೫ ಸಾವಿರ ಟನ್ ಕಬ್ಬನ್ನು ಬೇರೆ ಬೇರೆ ಕಾರ್ಖಾನೆಗಳಿಗೆ ರವಾನಿಸಲಾಗುತ್ತಿರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ, ಗಂಗಾವತಿ ಸಕ್ಕರೆ ಕಾರ್ಖಾನೆ ಈ ಕಬ್ಬನ್ನು ಅರೆಯದಿರುವುದಕ್ಕೆ ಕಾರಣ ವೇನು ?

ಇ) ಈ ಹಿಂದೆ ಗಂಗಾವತಿ ಜನತಾ ಮುಖಂಡರು ಸದರಿ ಸಕ್ಕರೆ ಕಾರ್ಖಾನೆಯನ್ನು ಸರ್ಕಾರವೇ ಪ್ರಾರಂಭಿಸುವುದು ಎಂದೂ ಅಧಿಕೃತವಾಗಿ ಹೇಳಿಕೆ ನೀಡಿರುವುದೂ ನಿಜವಲ್ಲವೆ ?

ಈ) ಹಾಗಿದ್ದಲ್ಲಿ, ಕಾರ್ಖಾನೆಯನ್ನು ಪ್ರಾರಂಭಿಸದಿರುವುದಕ್ಕೆ ಕಾರಣವೇನು ?

ಶ್ರೀ ಜೆ. ಹೆಚ್. ಪಟೇಲ್(ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಹೌದು.

ಆ) ಗಂಗಾವತಿ ಸಕ್ಕರೆ ಕಾರ್ಖಾನೆಯು ಕೆಲಸವನ್ನು ನಿಲ್ಲಿಸಿದೆ.

ಇ) ಸರ್ಕಾರದಿಂದ ಹೇಳಿಕೆಯನ್ನು ಕೊಟ್ಟಿಲ್ಲ.

ಈ) ಕಾರ್ಖಾನೆಯನ್ನು ಮಾರಬೇಕೆಂದು ಉದ್ದೇಶಿಸಲಾಗಿದೆ.

ಬಿಜಾಪುರ ಜಿಲ್ಲೆಯಲ್ಲಿರುವ ಸಿಮೆಂಟ್ ಫ್ಯಾಕ್ಟರಿಗಳ ಬಗ್ಗೆ.

೧೯೩೧ (ಡಿ). ಶ್ರೀ ಜಿ. ಎಸ್. ಬಾಗಲ್‌ಕೋಟೆ (ಜಮಖಂಡಿ).—ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯಲ್ಲಿರುವ ಸಣ್ಣ ಸಿಮೆಂಟ್ ಕಾರ್ಖಾನೆಗಳೆಷ್ಟು ಮತ್ತು ಎಲ್ಲಿ ಎಲ್ಲಿ ಇವೆ ?

ಆ) ಚಾಲೂ ಇರುವ ಸಿಮೆಂಟ್ ಕಾರ್ಖಾನೆಗಳು ಪ್ರತಿ ದಿನ ಉತ್ಪಾದಿಸುತ್ತಿರುವ ಸಿಮೆಂಟಿನ ಪ್ರಮಾಣವೆಷ್ಟು ?

ಇ) ರಾಜ್ಯ ಸರ್ಕಾರದಿಂದ ಸದರೀ ಕಾರ್ಖಾನೆಗಳಿಗೆ ಕೊಟ್ಟ ಸಹಾಯವೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ೯.

೧ ಮೆ. ಲೋಕಾಪುರ ಸಿಮೆಂಟ್ಸ್ (ಪ್ರೈ)ಲಿ. ಲೋಕಾಪುರ.

೨ ಮೆ. ಸಂಗಮ ಸಿಮೆಂಟ್ಸ್ (ಪ್ರೈ)ಲಿ. ಬಾಗಲಕೋಟೆ ತಾಲ್ಲೂಕು.

೩ ಮೆ. ಪೃಥ್ವಿ ಸಿಮೆಂಟ್ಸ್ (ಪ್ರೈ)ಲಿ. ತಾಳಿಕೋಟೆ.

೪ ಮೆ. ಬಸವೇಶ್ವರ ಸಿಮೆಂಟ್ಸ್ ಕಂಪನಿ (ಸ್ಥಾಪನೆಯ ಹಂತದಲ್ಲಿದೆ) ತಾಳಿಕೋಟೆ.

೫ ಮೆ. ಹೊನ್ನಾಳಿ ಸಿಮೆಂಟ್ಸ್ (ಇಂಡಿಯಾ) ಪ್ರೈ. ಲಿ. ತಾಳಿಕೋಟೆ.

೬ ಮೆ. ವಾಸ್ತುಪೂಜಾ ಸಿಮೆಂಟ್ಸ್ ಅಂಡ್ ಅಲೈಡ್ ಕೆಮಿಂಕಲ್ಸ್ (ಪ್ರೈ)ಲಿ. (ಸ್ಥಾಪನೆಯ ಹಂತದಲ್ಲಿದೆ) ಮುಧೋಳ್ ತಾಲ್ಲೂಕು.

೭ ಮೆ. ಚೆನ್ನಗಿರಿ ಸಿಮೆಂಟ್ಸ್ (ಪ್ರೈ)ಲಿ. ಮುಧೋಳ್ ತಾಲ್ಲೂಕು.

೮ ಮೆ. ಶ್ರೀ ಕ್ವಾಲಿಟಿ ಸಿಮೆಂಟ್ಸ್ (ಪ್ರೈ)ಲಿ. (ಸ್ಥಾಪನೆಯ ಹಂತದಲ್ಲಿದೆ) ಮುಧೋಳ್ ತಾಲ್ಲೂಕು.

೯ ಮೆ. ಮಹಾವೀರ್ ಸಿಲಿಕಾನ್ಸ್ (ಪ್ರೈ)ಲಿ. (ಸ್ಥಾಪನೆಯ ಹಂತದಲ್ಲಿದೆ) ಮುಧೋಳ್ ತಾಲ್ಲೂಕು.

ಆ) ೩ ಸಣ್ಣ ಸಿಮೆಂಟ್ ಕಾರ್ಖಾನೆಗಳು ಸಿಮೆಂಟ್ ಉತ್ಪಾದಿಸುತ್ತಿದ್ದು, ಅವುಗಳ ವಿವರ ಈ ಕೆಳಗಿನಂತಿದೆ.

೧	ಮೆ. ಲೋಕಾಪುರ ಸಿಮೆಂಟ್ಸ್ (ಪ್ರೈ)ಲಿ. ಲೋಕಾಪುರ	೯೦ ಟನ್‌ಗಳು (ಪ್ರತಿ ದಿನ)
೨	ಮೆ. ಸಂಗಮ್ ಸಿಮೆಂಟ್ಸ್, ಬಾಗಲಕೋಟೆ ತಾಲ್ಲೂಕು.	೨೦ ಟನ್‌ಗಳು (ಪ್ರತಿ ದಿನ)
೩	ಮೆ. ಪೃಥ್ವಿ ಸಿಮೆಂಟ್ಸ್, ತಾಳಿಕೋಟೆ	೨೦ ಟನ್‌ಗಳು (ಪ್ರತಿ ದಿನ)

ಇ) ಕೆ. ಎಸ್. ಎಫ್. ಸಿ..ಯು ಸ್ವತಂತ್ರವಾಗಿ ಅಥವಾ ಕೆ.ಎಸ್.ಐ.ಐ.ಡಿ.ಸಿ.ಯ ಜೊತೆಗೂಡಿ ಈ ಕೆಳಗಿನ ೮ ಘಟಕಗಳಿಗೆ ಸಾಲ ಸೌಲಭ್ಯ ಒದಗಿಸಿದೆ.

(ಮೊಬಲಗು ಲಕ್ಷ ರೂ.ಗಳಲ್ಲಿ)

	ಮಂಜೂರಾದ ಅವಧಿ ಸಾಲ		ಅಭಿವೃದ್ಧಿ ಸಾಲ	ಸಹಾಯಧನ
	ಕೆ.ಎಸ್.ಎಫ್.ಸಿ.	ಕೆ.ಎಸ್.ಐ.ಐ.ಡಿ.ಸಿ.		
೧	೨	೩	೪	೫
ಮೆ॥ ಲೋಕಾಪುರ ಸಿಮೆಂಟ್ಸ್ (ಪ್ರೈ) ಲಿಮಿಟೆಡ್	೨೮.೬೦	೮೯.೦೦	೧೦.೨೫	೯.೪೮
ಮೆ॥ ಸಂಗಮ ಸಿಂದೆಂಟ್ (ಪ್ರೈ) ಲಿಮಿಟೆಡ್	೩೦.೦೦	...	೪.೧೦	...

೧	೨	೩	೪	೫
ಮೆ॥ ಬಸವೇಶ್ವರ ಸಿಮೆಂಟ್ (ಇಂಡಿಯಾ) (ಪ್ರೈ)ಲಿ.	೩೦.೦೦	೬೦.೦೦	...	...
ಮೆ॥ ಹೊನ್ನಾಳಿ ಸಿಮೆಂಟ್ಸ್ (ಇಂಡಿಯಾ) (ಪ್ರೈ)ಲಿ.	೩೦.೦೦	೯೦.೦೦	...	...
ಮೆ॥ ವಾಸ್ತುಪೂಜಾ ಸಿಮೆಂಟ್ ಅಂಡ್ ಅ ೈಡ್ ಕೆಮಿಕಲ್ಸ್ (ಪ್ರೈ) ಲಿಮಿಟೆಡ್	೬೦.೦೦	೯೦.೦೦	...	...
ಮೆ॥ ಚಿನ್ನಗಿರಿ ಸಿಮೆಂಟ್ಸ್, (ಪ್ರೈ) ಲಿಮಿಟೆಡ್	೪೯.೮೦	...	...	...
ಮೆ॥ ವಂಪಾವೀರ ಸಿಲಿಕಾನ್ಸ್ (ಪ್ರೈ) ಲಿಮಿಟೆಡ್	೬೦.೦೦	೯೦.೦೦	...	...
ಮೆ॥ ಪೃಥ್ವಿ ಸಿಮೆಂಟ್ (ಪ್ರೈ)ಲಿ.	ಸಾಲವನ್ನು ನೀಡಿಲ್ಲ			
ಮೆ॥ ಕ್ವಾಲಿಟಿ ಸಿಮೆಂಟ್ಸ್	ಕೆಎಸ್ಐಐಡಿಸಿ ಯಿಂದ ರೂ ೨೯.೦೦ ಲಕ್ಷ ಈಕ್ವಿಟಿ ಪಡೆದಿದೆ. (ಐ.ಡಿ.ಬಿ.ಐ)ಯಿಂದ ಸಾಲ ೩೫.೯೫ ಪಡೆದಿದೆ)			

ಮುಧೋಳ ತಾಲ್ಲೂಕಿನಲ್ಲಿರುವ ಸಿಮೆಂಟ್ ಫ್ಯಾಕ್ಟರಿಗಳಿಗೆ ದೊರೆತ ಆರ್ಥಿಕ ಸಹಾಯದ ಬಗ್ಗೆ.

೧೯೪. ಶ್ರೀ ಜಿ. ಎಸ್. ಬಾಗಲಕೋಟೆ (ಜಮಖಂಡಿ).—ವಾಣಿಜ್ಯ, ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಧೋಳ ತಾಲ್ಲೂಕಿನಲ್ಲಿರುವ ಸಣ್ಣ ಸಿಮೆಂಟ್ ಕಾರ್ಖಾನೆಗಳು ಕರ್ನಾಟಕ ಕೈಗಾರಿಕಾ ಹಣಕಾಸು ಸಂಸ್ಥೆ ಮಂತ್ರಿತರ ಸರಕಾರಿ ಮಂತ್ರಿ ಆರೆ ಸರಕಾರಿ ಸಂಸ್ಥೆಗಳಿಂದ ಪಡೆದ ಸಾಲವೆಷ್ಟು ?

ಆ) ಸದರೀ ಕಾರ್ಖಾನೆಯವರು ಸಾಲವನ್ನು ತುಂಬಿದ್ದಾರೆಯೇ ?

ಇ) ಹಾಗಿಲ್ಲದಿದ್ದಲ್ಲಿ ಅಂಥವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ ?